ಮೈಸೂರಿನಲ್ಲಿ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಅನುಮತಿ ಕೋರಿಕೆಯ ಬಗ್ಗೆ

4274 (4875) : ಶ್ರೀ ಶಂಕರ ಲಿಂಗೇಗೌಡ, ಹೆಚ್.ಎಸ್. (ಚಾಮರಾಜ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಯಾವ ಯಾವ ಬಡಾವಣೆಗಳಲ್ಲಿ ನ್ಯಾಯಬೆಲೆ ಅಂಗಡಿಗಳಿವೆ; ತಿಳಿಸುವುದು;

ಆ) ನಗರದ ಇನ್ನೂ ಅನೇಕ ಬಡಾವಣೆಗಳಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ತೆರೆಯಲು ಅನುಮತಿ ಕೋರಿ ಅರ್ಜಿ ಬಂದಿದೆಯೇ;

ಇ) ಬಂದಿದ್ದರೆ, ಸದರಿ ಅರ್ಜಿಗಳ/ಅರ್ಜಿದಾರರ ವಿವರ ನೀಡುವುದು;

ಈ) ಹೊಸದಾಗಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಸರ್ಕಾರದ ನಿಲುವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಮೈಸೂರು ನಗರದಲ್ಲಿ ಪ್ರತಿ ಮೊಹಲ್ಲಾವಾರು ಕಾರ್ಯ ನಿರ್ವಹಿಸುತ್ತಿರುವ ನ್ಯಾಯಬೆಲೆ ಅಂಗಡಿಗಳ ವಿವರ ಕೆಳಕಂಡಂತಿದೆ.

ಕ್ರ.ಸ.	ಮೊಹಲ್ಲಾ ಹೆಸರು	ನ್ಯಾಯಬೆಲೆ ಅಂಗಡಿಗಳ ಸಂಖ್ಯೆ
1	ವಿ.ವಿ.ಮೊಹಲ್ಲಾ	38
2	ಚಾಮರಾಜ ಮೊಹಲ್ಲಾ	35
3	ಕೆ.ಆರ್.ಮೊಹಲ್ಲಾ	35
4	ಖಿಲ್ಲೆ ಮೊಹಲ್ಲಾ	37
5	ನಜರ್‌ಬಾದ್ ಮೊಹಲ್ಲಾ	34
6	ಮಂಡಿ ಮೊಹಲ್ಲಾ	34
7	ಲಷ್ಕರ್ ಮೊಹಲ್ಲಾ	35
8	ದೇವರಾಜ ಮೊಹಲ್ಲಾ	32
	ಒಟ್ಟು	280

ಆ) ಮೈಸೂರು ನಗರ ಪ್ರದೇಶದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಯನ್ನು ಕೋರಿ 4 ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಇ) ಹೊಸ ನ್ಯಾಯಬೆಲೆ ಅಂಗಡಿಯನ್ನು ಕೋರಿ ಸಲ್ಲಿಸಿರುವ ಅರ್ಜಿದಾರರ ವಿವರ ಈ ಕೆಳಕಂಡಂತಿದೆ.

1) ಶ್ರೀ ಕೆ.ರಮೇಶ್, ಮಂಜುನಾಥಪುರ.

2) ಶ್ರೀ ಎಸ್.ಮನೋಹರ್ ಸಿಂಗ್, ರಮಾಬಾಯಿ ನಗರ, ಮೈಸೂರು.

3) ಕೆ.ಎಸ್.ಆರ್.ಪಿ., ಮೈಸೂರು

4) ಶ್ರೀಮತಿ ಜಯಮ್ಮ, ಕೈಲಾಸಪುರಂ, ಮೈಸೂರು.

ಈ) ಅವಶ್ಯಕತೆ ಕಂಡುಬರುವ ಸ್ಥಳದಲ್ಲಿ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಸದ್ಯದಲ್ಲಿ ರಾಜ್ಯಾದ್ಯಂತ

ಹಳದಿ ಪಡಿತರ ಚೀಟಿ ಯೋಜನೆಯಡಿ ಪಡಿತರ ಚೀಟಿಗಳ ವಿತರಣೆ ಕಾರ್ಯ ನಡೆಯುತ್ತಿರುವುದರಿಂದ ಹೊಸ ನ್ಯಾಯಬೆಲೆ ಅಂಗಡಿ ಮಂಜೂರಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. (B1025230

ಕರ್ನಾಟಕ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ, 1992ಕ್ಕೆ ಸೂಕ್ತ ತಿದ್ದುಪಡಿ ತಂದು ನ್ಯಾಯಬೆಲೆ ಅಂಗಡಿಗಳನ್ನು ಸ್ತ್ರೀಶಕ್ತಿ ಗುಂಪುಗಳಿಗೆ ಪ್ರಥಮ ಆದ್ಯತೆಯ ಮೇಲೆ ಮಂಜೂರು ಮಾಡಲು ಕ್ರಮ ವಹಿಸಲಾಗುತ್ತಿದೆ.

ರಾಜ್ಯದ ಸ್ತ್ರೀಶಕ್ತಿ ಸಂಘಟನೆ ಸಹಕಾರದಿಂದ ಅಕ್ಷರ ದಾಸೋಹ ಕಾರ್ಯಕ್ರಮ ಜಾರಿಗೊಳಿಸುವ ಬಗ್ಗೆ

4275 (4876) : ಶ್ರೀ ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 'ಸ್ತ್ರೀ ಶಕ್ತಿ' ಸಂಘಟನೆ ಪ್ರಾರಂಭವಾದ ಮೇಲೆ ರಾಜ್ಯದಾದ್ಯಂತ ಎಷ್ಟು ಮಂದಿ ಮಹಿಳೆಯರಿಗೆ ಈ ಮೂಲಕ ಪ್ರಯೋಜನ, ಅನುಕೂಲವಾಗಿದೆ;

ಆ) ಈ ಸಂಘಟನೆಯಲ್ಲಿ ತೊಡಗಿಸಿ ಕೊಂಡಿರುವ ಮಹಿಳೆಯರ ಸಂಖ್ಯೆ ಎಷ್ಟು;

ಇ) ಈ ಸಂಘಟನೆಗಳ ಮೂಲಕ ಅಥವಾ ಈ ಸಂಘಟನೆಗಳ ಸಹಕಾರದಿಂದ 'ಅಕ್ಷರ ದಾಸೋಹ' ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) 11.16 ಲಕ್ಷ ಮಹಿಳೆಯರು ಪ್ರಯೋಜನವನ್ನು ಪಡೆದು ಕೊಂಡಿದ್ದಾರೆ.

ಆ) 11.16 ಲಕ್ಷ

ಇ) ಸಾಧ್ಯವಾದ ಕಡೆಗಳಲೆಲ್ಲ ಸ್ತ್ರೀಶಕ್ತಿ ಗುಂಪುಗಳ ಸಹಕಾರದಿಂದ 'ಅಕ್ಷರ ದಸೋಹ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ರೈತರ ಸಾಲದ ಬಡ್ಡಿ ಮನ್ನಾ ಮಾಡುವ ಬಗ್ಗೆ

4276 (4877) : ಶ್ರೀ ಶಂಕರ ಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳ ಯಾವ ಯಾವ ಊರಿನ ಎಷ್ಟೆಷ್ಟು ಮಂದಿ ರೈತರು ಯಾವ ಯಾವ ಉದ್ದೇಶಕ್ಕಾಗಿ ಎಷ್ಟು ಪ್ರಮಾಣದಲ್ಲಿ ಸಾಲ ಮಾಡಿರುವರು;

ಆ) ಸದರಿ ಸಾಲದ ಮೇಲೆ ವಿಧಿಸಿರುವ ಬಡ್ಡಿ ಪ್ರಮಾಣ ಎಷ್ಟು

ಇ) ರೈತರಿಂದ ಸರ್ಕಾರಕ್ಕೆ ಬಾಕಿ ಇರುವ ಅಸಲು ಮೊತ್ತ ಎಷ್ಟು; ಬಡ್ಡಿ ಮೊತ್ತ ಎಷ್ಟು;

ಈ) ಬರಗಾಲದಿಂದ (ಸತತ ಮೂರು) ನೊಂದಿರುವ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕೆಂಬ ಬಗ್ಗೆ ಸರ್ಕಾರದ ನಿಲುವೇನು; ತಿಳಿಸುವುದು?

ಶ್ರೀ ವಿ.ಎಸ್.ಕೌಜಲಗಿ (ಕೃಷಿ ಸಚಿವರು):

ಅ) ರಾಜ್ಯದ ಎಲ್ಲಾ ಜಿಲ್ಲೆಗಳಿಂದ : ಎಲ್ಲಾ ಊರುಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕಾಗಿದ್ದು ಇದು ಅಗಾಧ ಪ್ರಮಾಣದ ಕೆಲಸವಾಗಿರುತ್ತದೆ. ಮಾನ್ಯ ಸದಸ್ಯರು ನಿರ್ದಿಷ್ಟವಾದ ಜಿಲ್ಲೆಯ ಅಥವಾ ಊರಿನ ನಿರ್ಧಿಷ್ಟ ಮಾಹಿತಿಯನ್ನು ಕೇಳಿದಲ್ಲಿ ಒದಗಿಸಲಾಗುವುದು.

ಆ) ಸಹಕಾರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ರೈತರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಇರುವುದಿಲ್ಲ.

ಇ) ದಿನಾಂಕ:1.3.2002 ರಿಂದ 30.9.2002ರ ಖಾರಿಫ್ ಅವಧಿಯಲ್ಲಿ ಸಹಕಾರ ಸಂಘಗಳು ರೈತರಿಗೆ ನೀಡಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು. ತುಮಕೂರು.
ಕಾಸೂ. 21 - 350 ಪುಸ್ತಕಗಳು, ದಿ: 18-07-2004.